ಕರ್ನಾಟಕ ಸರ್ಕಾರ
ಧಾರ್ಮಿಕ ದತ್ತಿ ಇಲಾಖೆ

ॐ

|| ಶ್ರೀ ಲಕ್ಷ್ಮೀ ಜನಾರ್ದನ ಪ್ರಸನ್ನ || || ಶ್ರೀ ಮಾರಿಯಮ್ಮ ಪ್ರಸನ್ನ ||

# ಶ್ರೀ ಹೊಸ ಮಾರಿಗುಡಿ ದೇವಸ್ಥಾನ, ಕಾಪು

## ಕಾಪು ಶ್ರೀ ಹೊಸ ಮಾರಿಗುಡಿ ದೇವಸ್ಥಾನ ಅಭಿವೃದ್ಧಿ ಸಮಿತಿ (ರಿ.)

ಕಾಪು ತಾಲೂಕು, ಉಡುಪಿ ಜಿಲ್ಲೆ-574106



ಕಾಪುವಿನ ಅಮ್ಮನ ದೇಗುಲದ
ದ್ವಿತೀಯ ಹಂತದ ಕಾಮಗಾರಿಗಳ
ಸಾಕಾರಕ್ಕೆ ಸಾರುವ

# ವಿಜ್ಞಾಪನೆ

|| ಯಾ ದೇವಿ ಸರ್ವ ಭೂತೇಷು ಮಾತೃ ರೂಪೇಣ ಸಂಸ್ಥಿತಾ
ನಮಸ್ತಸ್ಯೈ ನಮಸ್ತಸ್ಯೈ ನಮಸ್ತಸ್ಯೈ ನಮೋ ನಮಃ ||



ಕಡಲ ತಡಿಯ ಪುಣ್ಯಭೂಮಿ, ದೈವಿಕ ಸೌಂದರ್ಯದ ನಾಡು
ಪ್ರಕೃತಿ, ಭಕ್ತಿ, ಸಂಸ್ಕೃತಿಯ ಸಂಗಮ ಕ್ಷೇತ್ರ

# ಸನಾತನ ಪರಂಪರೆಯ ಜೀವಂತ ಸಾಕ್ಷಿ ಕಾಪು ಕ್ಷೇತ್ರ

ಕಡಲ ತಡಿಯ ಪುಣ್ಯಭೂಮಿ ಹಾಗೂ ದೇವಳಗಳ ನಗರಿ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಉಡುಪಿ ಜಿಲ್ಲೆಯ, ಕಾಪು ವಿಧಾನಸಭಾ ಕ್ಷೇತ್ರದ ಕೇಂದ್ರ ನಗರ ಕಾಪು ಇಂದು ಧಾರ್ಮಿಕ ಹಾಗೂ ಪ್ರವಾಸೋದ್ಯಮದ ಕೇಂದ್ರವಾಗಿ ವಿಶ್ವದ ಗಮನ ಸೆಳೆಯುತ್ತಿದೆ.

ಶೈಕ್ಷಣಿಕ ಹಾಗೂ ಆರೋಗ್ಯ ಕ್ಷೇತ್ರದ ಬೆಳವಣಿಗೆಗಳು

ಟೆಂಪಲ್ & ಕೋಸ್ಟಲ್ ಟೂರಿಸಂ

ಕಲೆ-ಸಂಸ್ಕೃತಿ-ಜನಪದ ಪರಂಪರೆಗಳು

ಇವೆಲ್ಲವೂ ಸೇರಿ ಕಾಪುವಿನ ಸೌಂದರ್ಯ ಮತ್ತು ಖ್ಯಾತಿಗೆ ಮೆರುಗು ತಂದಿವೆ. ಮಾತ್ರವಲ್ಲದೆ ಕಾಪುವಿನ ಪ್ರವಾಸೋದ್ಯಮಕ್ಕೆ ಪೂರಕವಾಗಿ ಪೊಡವಿಗೊಡೆಯ ಉಡುಪಿ ಶ್ರೀ ಕೃಷ್ಣನ ಸನ್ನಿಧಿ, ಶೈಕ್ಷಣಿಕ ಮತ್ತು ಆರೋಗ್ಯ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿರುವ ಮಣಿಪಾಲವು ಸೇರಿಕೊಂಡಿದೆ.





# ವಿಜ್ಞಾಪನೆ

ಆತ್ಮೀಯ ಭಗವದ್ಭಕ್ತರೇ,

ಕಾಪುವಿನ ಉಚ್ಚಂಗಿ ಸಹಿತ ಶ್ರೀ ಮಾರಿಯಮ್ಮ ಅತಿ ಪ್ರತಾಪಿತ ಶಕ್ತಿ ದೇವತೆಯೆಂದೇ ಪ್ರಸಿದ್ಧಳು, ಅಮ್ಮನ ಪೂರ್ಣಾನುಗ್ರಹ ಮತ್ತು ಭಕ್ತರ ಸಹಕಾರದೊಂದಿಗೆ ಪ್ರಥಮ ಹಂತದಲ್ಲಿ ಬಾಗಲಕೋಟೆಯ ಇಳಕಲ್ ಕೆಂಪು ಶಿಲೆಯಿಂದ ನಿರ್ಮಾಣವಾದ ಗರ್ಭಗುಡಿ, ಉಚ್ಚಂಗಿ ಗುಡಿ, ಸುತ್ತುಪೌಳಿ, ಮುಖಮಂಟಪ, ರಾಜಗೋಪುರವನ್ನೊಳಗೊಂಡ ಮಂಟಪಗಳು ಹಾಗೂ ಸಮರ್ಪಿಸಲಾದ ಸ್ವರ್ಣ ಗದ್ದುಗೆ, ಅದ್ಭುತ ದಾರುಶಿಲ್ಪದ ಮೇಲ್ಛಾವಣಿಗಳು, ಶಿಲಾ ಕುಸುರಿಯ ಸ್ತಂಭಗಳು, ರಜತ ರಥ ಇವೆಲ್ಲವೂ ಅತ್ಯದ್ಭುತವಾಗಿ ಮೂಡಿಬಂದಿದೆ.

2025 ರ ಮಾರ್ಚ್ 02 ರಂದು ಅಮ್ಮ ನೂತನ ಸ್ವರ್ಣ ಗದ್ದುಗೆಯಲ್ಲಿ ಪ್ರತಿಷ್ಠೆಗೊಂಡು ಮಾರ್ಚ್ 05 ರಂದು ಬ್ರಹ್ಮಕಲಶೋತ್ಸವವು ಲಕ್ಷಾಂತರ ಭಕ್ತರ ಸಮ್ಮುಖದಲ್ಲಿ ಜರಗಿದೆ. ಈ ನವನಿರ್ಮಾಣದಲ್ಲಿ ಕೈಜೋಡಿಸಿದ ಎಲ್ಲಾ ದಾನಿಗಳು, ಭಕ್ತರು ಪಾವನರಾಗಿರುತ್ತಾರೆ. ಪ್ರತೀ ದಿನವೂ ಸಾವಿರಾರು ಭಕ್ತರು ಕ್ಷೇತ್ರಕ್ಕೆ ಆಗಮಿಸಿ ಹರಕೆ ಪೂಜಾದಿಗಳನ್ನು ಸಮರ್ಪಿಸಿ, ಭೋಜನ ಪ್ರಸಾದ ಸ್ವೀಕರಿಸಿ ಕೃತಾರ್ಥರಾಗುತ್ತಿದ್ದಾರೆ.

ದೇವಾಲಯ ಸರ್ವಾಂಗ ಸುಂದರವಾಗಬೇಕು ಭಕ್ತಾದಿಗಳ ಅವಶ್ಯಕತೆಗೆ ಅನುಗುಣವಾಗಿ ದ್ವಿತೀಯ ಹಂತದಲ್ಲಿ ಸುಮಾರು 45 ಕೋಟಿ ರೂಪಾಯಿ ಅಂದಾಜು ವೆಚ್ಚದಲ್ಲಿ ಸುಸಜ್ಜಿತ ಭೋಜನ ಶಾಲೆ, ವಸತಿ ಸಮುಚ್ಚಯ, ವಸ್ತು ಸಂಗ್ರಹಾಲಯ, ಯಾಗಶಾಲೆ, ವಾಣಿಜ್ಯ ಸಂಕೀರ್ಣದ ಕಾಮಗಾರಿಗಳು ಅತ್ಯಂತ ಅವಶ್ಯಕವಾಗಿ ನಡೆಯಬೇಕಾಗಿದೆ. ಈ ಎಲ್ಲಾ ಕನಸುಗಳು ಸಾಕಾರಗೊಳ್ಳಲು "ಶಿಲಾಸೇವಾ ಸಮರ್ಪಣೆ" ಎಂಬ ಅದ್ಭುತ ಕಲ್ಪನೆಯಿಂದ ಸಾಧ್ಯವಾಗುತ್ತದೆ ಎನ್ನುವುದು ದೃಢವಾಗಿದೆ.

"ಆತ್ಮಶುದ್ಧಕ್ಕಾಗಿ ಪ್ರಾರ್ಥನೆ ಸಂಪತ್ತು ಶುದ್ಧಕ್ಕಾಗಿ ದಾನ" ಎಂಬ ಉಕ್ತಿಯಂತೆ ಸಾವಿರ ಸಾವಿರ ವರ್ಷ ದೃಢವಾಗಿ ಬಾಳ್ವಿಕೆ ಬರುವ ಈ ಶಾಶ್ವತ ನಿರ್ಮಾಣ ನಮ್ಮ ಕಾಲದಲ್ಲಿ ಸಂರಚನೆಗೊಳ್ಳಲು ನಾವೆಲ್ಲರೂ ಸೇರಿ ಐಕ್ಯತೆಯಿಂದ ಶಕ್ತ್ಯಾನುಸಾರ ದೇಣಿಗೆ ನೀಡುವುದು ಅವಶ್ಯಕವಾಗಿದೆ. ಅಮ್ಮನ ಪ್ರತಿಯೊಬ್ಬ ಭಕ್ತರು ಶಿಲಾಸೇವೆಯನ್ನು ನೀಡುವ ಮೂಲಕ "ಕಾಪುವಿನ ಅಮ್ಮನ ಮಕ್ಕಳು" ತಂಡಕ್ಕೆ ಸೇರ್ಪಡೆಗೊಂಡು ತಮ್ಮ ಹೆಸರು ಅಮ್ಮನ ಸನ್ನಿಧಾನದಲ್ಲಿ ಅಮೃತ ಶಿಲೆಯಲ್ಲಿ ಶಾಶ್ವತವಾಗಿ ಮೂಡಿಬರುವಂತೆ ಮಾಡಿ ಅಮ್ಮನ ಕೃಪೆಗೆ ಪಾತ್ರರಾಗಿರಿ, ಅಮ್ಮನ ಒಡಲಾಳದಲ್ಲಿ ನಮ್ಮ ಹೆಸರು, ನಮ್ಮ ಹೃದಯಾಂತರಾಳದಲ್ಲಿ ಅಮ್ಮನ ಹೆಸರು ಸದಾ ಸ್ಮರಣೀಯವಾಗಲಿ, ಅಮ್ಮ ನಮ್ಮೆಲ್ಲರನ್ನು ಸದಾ ರಕ್ಷಿಸಿ ಪೊರೆಯಲಿ.

ದೇವಳದ ಉತ್ತರ ಭಾಗಕ್ಕೆ ಎರಡನೇ ಹಂತದಲ್ಲಿ ಸುಸಜ್ಜಿತ ಭೋಜನ ಶಾಲೆ, ಅತಿಥಿಗೃಹ, ಯಾಗಶಾಲೆ, ವಸ್ತು ಸಂಗ್ರಹಾಲಯ ಮತ್ತು ವಾಣಿಜ್ಯ ಸಂಕೀರ್ಣ ನಿರ್ಮಾಣವಾಗಲಿದ್ದು ವಿವರಗಳು ಈ ಕೆಳಗಿನಂತಿವೆ.



ಸಮಗ್ರ ಜೀರ್ಣೋದ್ಧಾರದ ನೀಲ ನಕಾಶೆ



ರೂ. 2357 ಲಕ್ಷ

## ಸುಸಜ್ಜಿತ ಅನ್ನಪೂರ್ಣ ಭೋಜನ ಶಾಲೆ

ಅನ್ನಪೂರ್ಣ ಭೋಜನ ಶಾಲೆಯ ತಳ ಅಂತಸ್ತಿನಲ್ಲಿ ಏಕಕಾಲಕ್ಕೆ ಸಹಸ್ರಾರು ಭಕ್ತರ ಅನ್ನಪ್ರಸಾದದ ವ್ಯವಸ್ಥೆಗಾಗಿ 25,000 ಚದರ ಅಡಿ ವಿಸ್ತೀರ್ಣವಿರುವ ಭೋಜನ ಶಾಲೆಯಿದ್ದು ಇದರಲ್ಲಿ ಪಾಕಶಾಲೆಯು 2800 ಚದರ ಅಡಿ ವಿಸ್ತೀರ್ಣವನ್ನು ಹೊಂದಿರುತ್ತದೆ. 304 ದರ್ಜೆಯ ಸ್ಟೇನ್ ಲೆಸ್ ಸ್ಟೀಲ್ ನ ಪಾತ್ರೆಗಳು ಹಾಗೂ ಉಪಕರಣಗಳನ್ನು ಹೊಂದಿರುವ ಅತ್ಯಾಧುನಿಕ ಸೌಲಭ್ಯವನ್ನೊಳಗೊಂಡ ಯೋಜನೆಯನ್ನು ರೂಪಿಸಲಾಗಿದೆ.

ಆಧುನಿಕ ಸೌಲಭ್ಯದ ಜೊತೆಗೆ 2500 ಚದರ ಅಡಿ ವಿಸ್ತೀರ್ಣದಲ್ಲಿ ಅನ್ನಪ್ರಸಾದ ತಯಾರಿಸಲು ಉಪಕರಣಗಳು, ಪಾತ್ರೆಗಳನ್ನು ಸ್ವಚ್ಚಗೊಳಿಸಲು ಯಂತ್ರೋಪಕರಣಗಳು, ಸಾಂಪ್ರದಾಯಿಕ ಶೈಲಿಯಲ್ಲಿ ಕಟ್ಟಿಗೆಯಿಂದ ಅಡುಗೆ ತಯಾರಿಸಲು ಪ್ರತ್ಯೇಕ ಅಡುಗೆ ಕೋಣೆಯನ್ನು ಪ್ರಸ್ತಾಪಿಸಲಾಗಿದೆ. ಅಡುಗೆ ತಯಾರಿಸಲು ಮತ್ತು ಭಕ್ತರಿಗೆ ಕುಡಿಯಲು ಶುದ್ಧ ನೀರಿನ ವ್ಯವಸ್ಥೆ ಹಾಗೂ ಕೊಳಚೆ ನೀರು ಶುದ್ಧೀಕರಣ ಘಟಕದ ವ್ಯವಸ್ಥೆಯನ್ನು ಮಾಡಲಾಗುತ್ತದೆ.

ಅಡುಗೆ ಕೋಣೆಗೆ ಸರಕುಗಳನ್ನು ಸಾಗಿಸುವ ವಾಹನಗಳ ಸುಗಮ ಸಂಚಾರ ಮತ್ತು ಯಾತ್ರಿಕರ ಸಂಚಾರಕ್ಕಾಗಿ ತಳ ಮಹಡಿಗೆ 3.65 ಮೀಟರ್ ಅಗಲದ ಇಳಿಜಾರಿನ ಉತ್ತಮವಾದ ಸಂಪರ್ಕದ ದಾರಿ ಮತ್ತು ಮೆಟ್ಟಿಲುಗಳನ್ನು ಹೊಂದಿದೆ. ಭೋಜನ ಶಾಲೆಯ ಛಾವಣಿಯನ್ನು ಬೇಕಾಗುವಷ್ಟು ಎತ್ತರಕ್ಕೆ ಮಾಡಿ ಸ್ವಚ್ಛ ಗಾಳಿಯನ್ನು ಪಡೆಯಲು ಸೂಕ್ತ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ ಹಾಗೂ ನೆಲ ಮಹಡಿಯಲ್ಲಿರುವ ವಿಶೇಷ ಅಡುಗೆ ಕೋಣೆಗೆ ಅಗಲವಾದ ಮೆಟ್ಟಿಲು ಮತ್ತು ಲಿಫ್ಟ್ ನ ವ್ಯವಸ್ಥೆ ಕಲ್ಪಿಸಲಾಗಿದೆ.

| | | |
|---|---|---|
| **ತಳ ಮಹಡಿ**<br>**DINING BLOCK** | ಇಪ್ಪತ್ತೈದು ಸಾವಿರ ಚ.ಅಡಿಗಳ ವಿಸ್ತೀರ್ಣದಲ್ಲಿ ಭೋಜನ ಶಾಲೆ, ಅಡುಗೆ ಕೋಣೆ ಮತ್ತು ದಾಸ್ತಾನು ಕೊಠಡಿಗಳನ್ನೊಳಗೊಂಡು ಸಹಸ್ರಾರು ಭಕ್ತಾದಿಗಳಿಗೆ ಏಕಕಾಲದಲ್ಲಿ ಭೋಜನ ಬಡಿಸುವ ವ್ಯವಸ್ಥೆ ಕಲ್ಪಿಸಲಾಗುವುದು. | **ರೂ. 1325 ಲಕ್ಷ** |
| **ನೆಲ ಮಹಡಿ** | ಐದು ಸಾವಿರದ ಐನೂರ ನಲವತ್ತೈದು ಚ.ಅಡಿಗಳ ವಿಸ್ತೀರ್ಣದಲ್ಲಿ ಅತಿಥಿಗಳಿಗಾಗಿ ವಿಶೇಷ ಆಹಾರ ತಯಾರಿಕಾ ಕೊಠಡಿ, ದೇವರ ಪ್ರಸಾದ ತಯಾರಿಕೆಗಾಗಿ ಅಧುನಿಕ ಯಂತ್ರಗಳನ್ನೊಳಗೊಂಡ ಸುಸಜ್ಜಿತ ಕೊಠಡಿ ಮತ್ತು ಬ್ರಾಹ್ಮಣರ ಅನ್ನಪ್ರಸಾದಕ್ಕಾಗಿ ಕೊಠಡಿ. ಈ ಎಲ್ಲಾ ಕೊಠಡಿಗಳಿಗೆ ಉತ್ತಮ ಗುಣಮಟ್ಟದ ಸ್ಟೈನ್ ಲೆಸ್ ಸ್ಟೀಲ್ ಪಾತ್ರೆಗಳನ್ನು ಸಂಯೋಜನೆ ಮಾಡಲಾಗಿದೆ. | **ರೂ. 207 ಲಕ್ಷ** |
| **ಮೊದಲನೇ ಮಹಡಿ** | ಐದು ಸಾವಿರದ ಐನೂರ ನಲವತ್ತೈದು ಚ.ಅಡಿಗಳ ವಿಸ್ತೀರ್ಣದಲ್ಲಿ ವಿಶೇಷ ಅತಿಥಿಗಳಿಗಾಗಿ ಭೋಜನ ಶಾಲೆ (125 ಜನರ ಸಾಮರ್ಥ್ಯ) ವ್ಯವಸ್ಥೆಯನ್ನು ಕಲ್ಪಿಸಲಾಗುವುದು. | **ರೂ. 207 ಲಕ್ಷ** |
| **ಎರಡನೇ ಮಹಡಿ** | ಐದು ಸಾವಿರದ ಐನೂರ ನಲವತ್ತೈದು ಚ.ಅಡಿಗಳ ವಿಸ್ತೀರ್ಣದ ಸುಸಜ್ಜಿತ ವಸತಿ ಸಂಕೀರ್ಣದಲ್ಲಿ ಆರು ವಸತಿ ಕೊಠಡಿಗಳು ಮತ್ತು ಕೊಠಡಿಗಳಿಗೆ ಪ್ರತ್ಯೇಕ ಶೌಚಾಲಯ ವ್ಯವಸ್ಥೆಯನ್ನು ಕಲ್ಪಿಸಲಾಗುವುದು. | **ರೂ. 259 ಲಕ್ಷ** |
| **ಮೂರನೇ ಮಹಡಿ** | ಐದು ಸಾವಿರದ ಐನೂರ ನಲವತ್ತೈದು ಚ.ಅಡಿಗಳ ವಿಸ್ತೀರ್ಣದ ಸುಸಜ್ಜಿತ ವಸತಿ ಸಂಕೀರ್ಣದಲ್ಲಿ ಆರು ವಸತಿ ಕೊಠಡಿಗಳು ಮತ್ತು ಕೊಠಡಿಗಳಿಗೆ ಪ್ರತ್ಯೇಕ ಶೌಚಾಲಯ ವ್ಯವಸ್ಥೆಯನ್ನು ಕಲ್ಪಿಸಲಾಗುವುದು. | **ರೂ. 259 ಲಕ್ಷ** |
| **ಧ್ಯಾನ ಮಂಟಪ** | ಹನ್ನೊಂದು ಸಾವಿರದ ಇನ್ನೂರ ಎಂಬತ್ತೈದು ಚ.ಅಡಿಗಳ ವಿಸ್ತೀರ್ಣದ ಛಾವಣಿಯ ಹಸಿರು ಉದ್ಯಾನವನದಲ್ಲಿ ಧ್ಯಾನ ಮಂಟಪ, ಯೋಗ ಮಂದಿರ ಹಾಗೂ ಆಧ್ಯಾತ್ಮಿಕ ವೇದಿಕೆಯನ್ನು ಒಳಗೊಂಡಿರುತ್ತದೆ. | **ರೂ. 100 ಲಕ್ಷ** |

**ವಿ. ಸೂ.:** ಸುಸಜ್ಜಿತ ಭೋಜನ ಶಾಲೆಯ ನಿರ್ಮಾಣಕ್ಕಾಗಿ 9,99,999/- ರೂಪಾಯಿ ನೀಡುವ ದಾನಿಗಳ 18"x12" ಅಳತೆಯ ಭಾವಚಿತ್ರ ಮತ್ತು ಹೆಸರನ್ನು ಭೋಜನ ಶಾಲೆಯ ಒಳಭಾಗದಲ್ಲಿ ಅಳವಡಿಸಲಾಗುವುದು ಮತ್ತು ಹೆಸರನ್ನು ಅಮೃತ ಶಿಲೆಯಲ್ಲಿ ಕೆತ್ತಿಸಿ 'ಕಾಪುವಿನ ಅಮ್ಮನ ಮಕ್ಕಳು' ತಂಡಕ್ಕೆ ಸೇರ್ಪಡೆಗೊಳಿಸಲಾಗುವುದು ಹಾಗೂ 'ಅಮ್ಮನ ಅನುಗ್ರಹ' ಸ್ಮರಣ ಸಂಚಿಕೆಯಲ್ಲಿ ಭಾವಚಿತ್ರ ಮತ್ತು ಹೆಸರನ್ನು ಪ್ರಕಟಿಸಲಾಗುವುದು.

## ವಿಶೇಷ ಅತಿಥಿ ಗೃಹ (ರೂಪಾಯಿ 945 ಲಕ್ಷ)

| | | |
|---|---|---|
| **ನೆಲ ಮಹಡಿ** | ನೆಲ ಮಹಡಿಯ ಪ್ರವೇಶ ದ್ವಾರದಲ್ಲಿ ಸ್ವಾಗತಕಾರರ ಕೊಠಡಿ ಮತ್ತು ವಸ್ತು ಪ್ರದರ್ಶನ ಹಾಗೂ ಸಾಂಸ್ಕೃತಿಕ ಕಲೆಯ ಚಟುವಟಿಕೆಗಳಿಗಾಗಿ ವಿಶೇಷ ಸಭಾಭವನ ಮತ್ತು ಸನಾತನ ಸಂಸ್ಕೃತಿಯ ಮಾಹಿತಿಯನ್ನೊಳಗೊಂಡ ಪುಸ್ತಕಗಳ ಗ್ರಂಥಾಲಯವನ್ನೊಳಗೊಂಡಿದೆ. | **ರೂ. 225 ಲಕ್ಷ** |
| **ಮೊದಲನೇ ಮಹಡಿ** | ಈ ಮಹಡಿಯಲ್ಲಿ ಉನ್ನತ ದರ್ಜೆಯ ಅತ್ಯಾಧುನಿಕ ಪೀಠೋಪಕರಣಗಳನ್ನೊಳಗೊಂಡ 12 ಹವಾನಿಯಂತ್ರಿತ ಸುಸಜ್ಜಿತ ಕೊಠಡಿಗಳಿದ್ದು, ಪ್ರತೀ ಕೊಠಡಿಗಳಿಗೆ ಸ್ನಾನಗೃಹಗಳನ್ನು ಜೋಡಿಸಲಾಗಿದೆ ಮತ್ತು ಕಿಂಗ್ ಸೈಜ್ ಹಾಸಿಗೆ, ದೂರವಾಣಿ, ವೈ-ಫೈ, ಟಿವಿ ಹಾಗೂ ಇನ್ನಿತರ ವ್ಯವಸ್ಥೆಗಳನ್ನು ಕಲ್ಪಿಸಲಾಗುತ್ತದೆ. | **ರೂ. 240 ಲಕ್ಷ** |
| **ಎರಡನೇ ಮಹಡಿ** | ಈ ಮಹಡಿಯಲ್ಲಿ ಉನ್ನತ ದರ್ಜೆಯ ಅತ್ಯಾಧುನಿಕ ಪೀಠೋಪಕರಣಗಳನ್ನೊಳಗೊಂಡ 12 ಹವಾನಿಯಂತ್ರಿತ ಸುಸಜ್ಜಿತ ಕೊಠಡಿಗಳಿದ್ದು, ಪ್ರತೀ ಕೊಠಡಿಗಳಿಗೆ ಸ್ನಾನಗೃಹಗಳನ್ನು ಜೋಡಿಸಲಾಗಿದೆ ಮತ್ತು ಕಿಂಗ್ ಸೈಜ್ ಹಾಸಿಗೆ, ದೂರವಾಣಿ, ವೈ-ಫೈ, ಟಿವಿ ಹಾಗೂ ಇನ್ನಿತರ ವ್ಯವಸ್ಥೆಗಳನ್ನು ಕಲ್ಪಿಸಲಾಗುತ್ತದೆ. | **ರೂ. 240 ಲಕ್ಷ** |
| **ಮೂರನೇ ಮಹಡಿ** | ಈ ಮಹಡಿಯಲ್ಲಿ ಉನ್ನತ ದರ್ಜೆಯ ಅತ್ಯಾಧುನಿಕ ಪೀಠೋಪಕರಣಗಳನ್ನೊಳಗೊಂಡ 12 ಹವಾನಿಯಂತ್ರಿತ ಸುಸಜ್ಜಿತ ಕೊಠಡಿಗಳಿದ್ದು, ಪ್ರತೀ ಕೊಠಡಿಗಳಿಗೆ ಸ್ನಾನಗೃಹಗಳನ್ನು ಜೋಡಿಸಲಾಗಿದೆ ಮತ್ತು ಕಿಂಗ್ ಸೈಜ್ ಹಾಸಿಗೆ, ದೂರವಾಣಿ, ವೈ-ಫೈ, ಟಿವಿ ಹಾಗೂ ಇನ್ನಿತರ ವ್ಯವಸ್ಥೆಗಳನ್ನು ಕಲ್ಪಿಸಲಾಗುತ್ತದೆ. | **ರೂ. 240 ಲಕ್ಷ** |

**ವಿ. ಸೂ.: ಅತ್ಯಾಧುನಿಕವಾಗಿ ನಿರ್ಮಾಣವಾಗಲಿರುವ ಯಾತ್ರಾರ್ಥಿಗಳ ಅತಿಥಿ ಗೃಹದ ಒಂದು ಕೊಠಡಿಯ ಸೇವೆಯಾಗಿ ರೂಪಾಯಿ 27 ಲಕ್ಷ ನೀಡುವ ದಾನಿಗಳ ಭಾವಚಿತ್ರ ಸಹಿತ ಹೆಸರನ್ನು ಕೊಠಡಿಯ ಒಳಭಾಗದಲ್ಲಿ ಅಳವಡಿಸಿ, ಹೆಸರನ್ನು ಅಮೃತ ಶಿಲೆಯಲ್ಲಿ ಕೆತ್ತಿಸಲಾಗುವುದು ಮತ್ತು 'ಕಾಪುವಿನ ಅಮ್ಮನ ಮಕ್ಕಳು' ತಂಡಕ್ಕೆ ಸೇರ್ಪಡೆಗೊಳಿಸಲಾಗುವುದು ಹಾಗೂ 'ಅಮ್ಮನ ಅನುಗ್ರಹ' ಸ್ಮರಣ ಸಂಚಿಕೆಯಲ್ಲಿ ಭಾವಚಿತ್ರ ಮತ್ತು ಹೆಸರನ್ನು ಪ್ರಕಟಿಸಲಾಗುವುದು.**

## ವಸ್ತು ಸಂಗ್ರಹಾಲಯ (ರೂ. 225 ಲಕ್ಷ)

ಯಾಗಶಾಲೆಯ ಪಶ್ಚಿಮ ಭಾಗದಲ್ಲಿ ನೆಲ ಮತ್ತು ಮೊದಲ ಮಹಡಿಗಳಲ್ಲಿ ಸಾಂಪ್ರದಾಯಿಕ ಸ್ಥಳೀಯ ಕಲಾಕೃತಿಗಳ ವಸ್ತುಸಂಗ್ರಹಾಲಯವನ್ನು ನಿರ್ಮಿಸಿ, ಎರಡನೇ ಮಹಡಿಯನ್ನು ನೃತ್ಯ ಹಾಗು ಇನ್ನಿತರ ಕಲಾ ಪ್ರಾಕಾರಗಳ ಅಭ್ಯಾಸಕ್ಕಾಗಿ ಮೀಸಲಿಡಲಾಗುವುದು ಮತ್ತು ಮೂರನೇ ಮಹಡಿಯನ್ನು ಶ್ರವ್ಯ ದೃಶ್ಯ ಕೊಠಡಿ ಮತ್ತು ಯಕ್ಷಗಾನ ರಂಗಭೂಮಿಯಂತಹ ಸಾಂಪ್ರದಾಯಿಕ ಸಾಂಸ್ಕೃತಿಕ ಚಟುವಟಿಕೆಗಳನ್ನು ಪ್ರೋತ್ಸಾಹಿಸಲು ಸಣ್ಣ ಕಲಾ ರಂಗಮಂದಿರಕ್ಕಾಗಿ ವಿನ್ಯಾಸಗೊಳಿಸಲಾಗುವುದು ಮತ್ತು ಬೋಧನಾ ಕೇಂದ್ರದಂತೆ ಅಭಿವೃದ್ಧಿಪಡಿಸಲಾಗುವುದು.

## ವಾಣಿಜ್ಯ ಸಂಕೀರ್ಣ (ರೂ. 165 ಲಕ್ಷ)

ಸ್ಥಳೀಯ ಸಾಂಪ್ರದಾಯಿಕ ಶೈಲಿಯಲ್ಲಿ ನಿರ್ಮಾಣವಾಗಲಿರುವ ವಾಣಿಜ್ಯ ಸಂಕೀರ್ಣದಲ್ಲಿ ಪೂಜಾ ಪರಿಕರಗಳು, ಶಿಲ್ಪಕಲಾ ಮತ್ತು ಪುಸ್ತಕ ಮಳಿಗೆ, ಹೂವಿನ ಅಂಗಡಿ, ತುಳುನಾಡಿನ ಖಾದ್ಯಗಳ ಉಪಹಾರ ಗೃಹವನ್ನೊಳಗೊಂಡ 9 ಅಂಗಡಿಗಳನ್ನು ಹೊಂದಿದ್ದು ಇದರ ಸುತ್ತಲೂ ದೇವಳಕ್ಕೆ ಬರುವ ಭಕ್ತಾದಿಗಳಿಗಾಗಿ ಉದ್ಯಾನವನವನ್ನು ಅತ್ಯಂತ ಸುಂದರವಾಗಿ ವಿನ್ಯಾಸಗೊಳಿಸಲಾಗಿದೆ.



ಶಿಲಾ ಸೇವೆಯ ವಿವರ

| | |
|---|---|
| 9 ಶಿಲೆ<br>ರೂ. 9,999/- | 99 ಶಿಲೆ<br>ರೂ. 99,999/- |
| 999 ಶಿಲೆ<br>ರೂ. 9,99,999/- | 9999 ಶಿಲೆ<br>ರೂ. 99,99,999/- |

**ವಿಶೇಷ ಸೂಚನೆ :**

- 9 ಶಿಲಾಸೇವೆಯ ಬಾಬ್ತು ರೂ. 9,999/- ಹಾಗೂ ಮೇಲ್ಪಟ್ಟು ನೀಡಿದ ದಾನಿಗಳನ್ನು "ಕಾಪುವಿನ ಅಮ್ಮನ ಮಕ್ಕಳು" ತಂಡಕ್ಕೆ ಸೇರ್ಪಡೆಗೊಳಿಸಿ, ಅವರ ಹೆಸರು ಮತ್ತು ಭಾವಚಿತ್ರವನ್ನು "ಅಮ್ಮನ ಅನುಗ್ರಹ" ಸ್ಮರಣ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.
- 99 ಶಿಲಾಸೇವೆಯ ಬಾಬ್ತು ರೂ. 99,999/- ಹಾಗೂ ಮೇಲ್ಪಟ್ಟು ನೀಡಿದ ದಾನಿಗಳನ್ನು "ಕಾಪುವಿನ ಅಮ್ಮನ ಮಕ್ಕಳು" ತಂಡಕ್ಕೆ ಸೇರ್ಪಡೆಗೊಳಿಸಿ, ಅವರ ಹೆಸರನ್ನು ಅಮೃತ ಶಿಲೆಯಲ್ಲಿ ಕೆತ್ತಿಸಲಾಗುವುದು ಹಾಗೂ ಹೆಸರು ಮತ್ತು ಭಾವಚಿತ್ರವನ್ನು "ಅಮ್ಮನ ಅನುಗ್ರಹ" ಸ್ಮರಣ ಹಂಚಿಕೆಯಲ್ಲಿ ಪ್ರಕಟಿಸಲಾಗುವುದು.

www.srihosamarigudikaup.org/projects

ತಮ್ಮೆಲ್ಲರ ಸಹಕಾರವನ್ನು ಬಯಸುವ

**ರಾಜರ್ಷಿ ಕೆ. ವಾಸುದೇವ ಶೆಟ್ಟಿ**
ಅಧ್ಯಕ್ಷರು ಮತ್ತು ಸರ್ವಸದಸ್ಯರು
ಕಾಪು ಶ್ರೀ ಹೊಸ ಮಾರಿಗುಡಿ ದೇವಸ್ಥಾನ
ಅಭಿವೃದ್ಧಿ ಸಮಿತಿ (ರಿ.)


**ಶ್ರೀ ರತ್ನಾಕರ ಶೆಟ್ಟಿ ನಡಿಕೆರೆ**
ಅಧ್ಯಕ್ಷರು ಮತ್ತು ಸರ್ವಸದಸ್ಯರು
ವ್ಯವಸ್ಥಾಪನಾ ಸಮಿತಿ
ಶ್ರೀ ಹೊಸ ಮಾರಿಗುಡಿ ದೇವಸ್ಥಾನ, ಕಾಪು

**ಶ್ರೀ ರವಿಕಿರಣ್**
ಕಾರ್ಯನಿರ್ವಹಣಾಧಿಕಾರಿ
ಶ್ರೀ ಹೊಸ ಮಾರಿಗುಡಿ ದೇವಸ್ಥಾನ, ಕಾಪು

ಕಾಪುವಿನ ಅಮ್ಮನ ಅಪ್ಪಣೆಯಂತೆ ದೇವಳದಿಂದ ದೇಣಿಗೆ ಸಂಗ್ರಹಕ್ಕೆ ಎಲ್ಲಿಯೂ ಯಾರನ್ನು ನೇಮಿಸಿಲ್ಲ, ಸೇವೆಯನ್ನು ನೀಡುವ ಭಕ್ತರು ಕ್ಷೇತ್ರಕ್ಕೆ ಬಂದು ಸಲ್ಲಿಸಬಹುದು ಅಥವಾ ಬ್ಯಾಂಕ್ ಖಾತೆಗೆ ಸೇವೆಯ ಮೊತ್ತವನ್ನು ವರ್ಗಾವಣೆ ಮಾಡಿ ಅಭಿವೃದ್ಧಿ ಸಮಿತಿ ಕಛೇರಿಗೆ ವಿವರಗಳನ್ನು ತಿಳಿಸಬೇಕಾಗಿ ವಿನಂತಿ.

BANK DETAILS

| | | |
|---|---|---|
| **NAME** | : | **KAUP SRI HOSA MARIGUDI DEVASTHANA ABHIVRIDDHI SAMITHI** |
| **BANK NAME** | : | **UNION BANK OF INDIA** |
| **BRANCH** | : | **ULIYARAGOLI, KAUP** |
| **A/C NO** | : | **520101018918790** |




**ಸಂಪರ್ಕ :**
+91 9481550999
kaupshrihosamarigudiabhivridhi@gmail.com
www.srihosamarigudikaup.org

